



ಸಂನ್ಯಾಸಿಯ ತ್ಯಾಗ

ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ ಎಂಬ ಆಶ್ರಮಗಳಿವೆ. ಸಂನ್ಯಾಸಿಗಳು ಕಾಮ್ಯಕರ್ಮಗಳನ್ನು ತ್ಯಜಿಸಬೇಕು, ಆದರೆ ನಿತ್ಯಕರ್ಮಗಳನ್ನು ಕಾಮನಾಶೂನ್ಯರಾಗಿ ಮಾಡಬೇಕು. ದಂಡಧಾರಣೆ, ಭೈಕ್ಷಚರ್ಯೆ, ತೀರ್ಥಯಾತ್ರೆ, ಪೂಜೆ, ಜಪ ಇವೇ ಮೊದಲಾದ ಕರ್ಮಗಳ ಮೂಲಕ ಇವರಿಗೆ ಭಗವಂತನೊಡನೆ ಐಕ್ಯತೆ ಉಂಟಾಗುತ್ತದೆ.

ಯಾರ ಮುಖಾಂತರ ಭಗವಂತ ಲೋಕಶಿಕ್ಷಣವನ್ನು ಮಾಡಬೇಕಾಗಿದೆಯೋ ಅವರಿಗೆ ಸಂಸಾರತ್ಯಾಗದ ಆವಶ್ಯಕತೆಯಿದೆ. ಆಚಾರ್ಯ ಲೋಕಶಿಕ್ಷಕ; ಆದ್ದರಿಂದ ಆತ ಕಾಮಕಾಂಚನತ್ಯಾಗಿಯಾಗುವುದರ ಆವಶ್ಯಕತೆಯಿದೆ. ಇಲ್ಲದಿದ್ದರೆ ಆತನ ಉಪದೇಶ ಬೇರುಬಿಡದು. ಬರಿಯ ಆಂತರಿಕ ತ್ಯಾಗವೇ ಸಾಕಾಗದು, ಬಾಹ್ಯ ತ್ಯಾಗವೂ ಬೇಕೇ ಬೇಕು. ಆಗ ಮಾತ್ರ ಲೋಕಶಿಕ್ಷಣ ನಡೆಯುತ್ತದೆ. ಹಾಗಿಲ್ಲದೆ ಇದ್ದರೆ ಜನರು ಯೋಚಿಸುತ್ತಾರೆ: "ಈತ ಕಾಮಕಾಂಚನವನ್ನು ತ್ಯಾಗಮಾಡಬೇಕೆಂದು ನಮಗೆ ಬೋಧಿಸುತ್ತಿದ್ದರೂ, ತಾನು ಮಾತ್ರ ಅವನ್ನು ಭೋಗಿಸುತ್ತಿದ್ದಾನೆ."

ಸಂನ್ಯಾಸಿ ಮಾನಸಿಕವಾಗಿ ಕಾಮಕಾಂಚನ ತ್ಯಾಗಮಾಡಿ, ಬಾಹ್ಯದಲ್ಲಿ ಅವುಗಳ ಮಧ್ಯೆ ಓಡಾಡುತ್ತಿದ್ದರೆ, ಆತನ ಮುಖಾಂತರ ಲೋಕಶಿಕ್ಷಣ ಕಾರ್ಯ ನಡೆಯದು. ಜನರು ಆಡಿಕೊಳ್ಳುತ್ತಾರೆ: "ಈತ ಮಚ್ಚುಮರೆಯಲ್ಲಿ ಬೆಲ್ಲ ತಿನ್ನುತ್ತಾನೆ" ಎಂದು. ಸಂನ್ಯಾಸಿ ಕಾಮಕಾಂಚನ ತ್ಯಾಗ ಮಾಡಲೇಬೇಕು. ಆತ ಮತ್ತೆ ಅವನ್ನು ಸ್ವೀಕರಿಸಲಾಗುವುದಿಲ್ಲ, ಉಗುಳಿಬಿಟ್ಟ ಉಗುಳನ್ನು ಮತ್ತೆ ತೆಗೆದು ನುಂಗಬಾರದು. ಸಂನ್ಯಾಸಿ ಯಾರಿಗಾದರೂ, ಏನನ್ನಾದರೂ ಕೊಟ್ಟರೆ ಅದನ್ನು ತಾನು ಕೊಡುತ್ತಿದ್ದೇನೆ ಅಂತ ಭಾವಿಸೋದಿಲ್ಲ. ದಯೆ ತೋರುವುದು ಭಗವಂತನ ಹಕ್ಕು. ಮನುಷ್ಯನಿಂದ ದಯೆ ತೋರಲೆಂತಾದೀತು? ಕೇವಲ ಸಂನ್ಯಾಸಿ ಮತ್ತು ಹಕ್ಕಿ ಕೂಡಿಡುವುದಿಲ್ಲ.

ಸಂನ್ಯಾಸಿ ಹಣವನ್ನು ಸ್ವೀಕರಿಸೋದು, ಲೋಭದಿಂದ ಮೋಹಕ ವಸ್ತುಗಳಲ್ಲಿ ಆಸಕ್ತನಾಗಿರೋದು, ಇವೆಲ್ಲ ಯಾವ ರೀತಿಯಾಗಿ ತೋರುತ್ತದೆ ಎಂಬುದು ನಿಮಗೆ ಗೊತ್ತೆ? ಇದು ಬ್ರಾಹ್ಮಣ ವಿಧವೆ ಬಹಳ ಕಾಲ ಹವಿಷ್ಯಾನ್ನ ತಿಂದು, ನಿರಂತರ ಬ್ರಹ್ಮಚರ್ಯ ಪರಿಪಾಲನೆ ಮಾಡಿಕೊಂಡು ಹೋಗಿ ಕೊನೆಗೆ ಒಬ್ಬ ನೀಚನನ್ನು ಕಟ್ಟಿಕೊಂಡಂತೆ (ಎಲ್ಲರೂ ಸ್ತಂಭಿತರಾದಂತೆ ಕಾಣುತ್ತಿದ್ದಾರೆ). ತ್ಯಾಗಿಗಳಿಗೆ ಅತ್ಯಂತ ಕಠಿಣವಾದ ನಿಯಮ. ಕಾಮಕಾಂಚನದ ಸಹವಾಸ ಲೇಶ ಮಾತ್ರವೂ ಇರಕೂಡದು. ಹಣವನ್ನು ತಮ್ಮ ಕೈಯಿಂದ ಮುಟ್ಟುವುದಂತೂ ಇಲ್ಲವೇ ಇಲ್ಲ—ಹತ್ತಿರ ಇಡಲೂ ಕೂಡ ಅನುಮತಿ ಕೊಡಕೂಡದು.

ಸಾಧುವು ಭಗವಂತನ ನಾಮಗುಣಸಂಕೀರ್ತನೆ ಮಾಡದೆ ಇದ್ದರೆ, ಹೇಗೆ ತಾನೆ ಜನರಿಗೆ ಭಗವಂತನಲ್ಲಿ ಶ್ರದ್ಧೆ, ಭಕ್ತಿ, ವಿಶ್ವಾಸ ಉಂಟಾದೀತು? ಮೂರು ತಲೆಗಳಿಂದಲೂ ಅಮೀರರಾಗಿ ಬಂದಿರುವ ಮನೆತನಕ್ಕೆ ಸೇರಿದವನಿವ ಎಂದು ಜನರಿಗೆ ಗೊತ್ತಾದರೆ ತಾನೆ ಅವರು ಆತನ ಮಾತಿಗೆ ಬೆಲೆಕೊಡುತ್ತಾರೆ!

ಸಂನ್ಯಾಸಿಗಳಿಗೆ ಬಹಳ ಕಠಿಣ ನಿಯಮ. ಹೆಂಗಸರ ಚಿತ್ರಪಟ ಕೂಡ ನೋಡಕೂಡದು. ಆದರೆ ಈ ನಿಯಮ ಸಂಸಾರಿಗಳಿಗಲ್ಲ. ಹೆಂಗಸು ಬಹಳ ಭಕ್ತೆಯಾಗಿದ್ದರೂ ಸಾಧಕ ಆಕೆಯೊಡನೆ ಬೆರೆಯಕೂಡದು. ಜಿತೇಂದ್ರಿಯನಾಗಿದ್ದರೂ ಲೋಕಶಿಕ್ಷಣಾರ್ಥವಾಗಿ ಸಂನ್ಯಾಸಿ ಹಾಗೆ ವರ್ತಿಸಬೇಕಾಗುತ್ತದೆ. ಸಂನ್ಯಾಸಿಯ ನೂರಕ್ಕೆ ನೂರು ಭಾಗ ತ್ಯಾಗ ಕಣ್ಣಿಗೆ ಬಿದ್ದರೆ ತಾನೆ ಸಂಸಾರಿಗಳು ತ್ಯಾಗಿಗಳಾಗಲು ಪ್ರಯತ್ನಿಸುತ್ತಾರೆ; ಇಲ್ಲದಿದ್ದರೆ ಅವರು ಇನ್ನೂ ಆಳ ಆಳಕ್ಕೆ ಮುಳುಗಿಹೋಗಿಬಿಡುತ್ತಾರೆ. ಸಂನ್ಯಾಸಿ ಜಗದ್ಗುರು.

(ಇಪ್ಪತ್ತಮೂರೋ–ಇಪ್ಪತ್ತನಾಲ್ಕೋ ವಯಸ್ಸಿನ ನಿತ್ಯಗೋಪಾಲನನ್ನು ಪರಮಹಂಸರು ಬಹಳವಾಗಿ ಪ್ರೀತಿಸುತ್ತಿದ್ದರು. ಆತನಿಗೆ ವಿವಾಹವಾಗಿಲ್ಲ. ಬಾಲಕನ ಅವಸ್ಥೆ. ಸದಾ ಭಾವರಾಜ್ಯದಲ್ಲೇ ಮುಳುಗಿರುತ್ತಾನೆ. ಆತನದು ಪರಮಹಂಸಾವಸ್ಥೆ ಎಂಬುದಾಗಿ ಶ್ರೀರಾಮಕೃಷ್ಣರು ಹೇಳುತ್ತಿದ್ದರು). ಸುಮಾರು ಇಪ್ಪತ್ತೆರಡು ವಯಸ್ಸಿನ ಒಬ್ಬ ಮಹಾ ಭಕ್ತೆ, ನಿತ್ಯಗೋಪಾಲನ ಬಾಲಾವಸ್ಥೆಯನ್ನು ನೋಡಿ ಸಂತಾನಭಾವದಿಂದ, ಅವನನ್ನು ಅಡಿಗಡಿಗೆ ತನ್ನ ಮನೆಗೆ ಕರೆಸಿಕೊಳ್ಳುತ್ತಿರುವುದನ್ನು ಕಂಡ ಪರಮಹಂಸರು: "ಸಾಧು, ಎಚ್ಚರಿಕೆ! ಎಲ್ಲೋ ಅಪರೂಪಕ್ಕೆ ಒಮ್ಮೆ ಹೋಗು; ಅಡಿಗಡಿಗೆ ಹೋಗಬೇಡ—ಬಲೆಗೆ ಬಿದ್ದುಬಿಡುತ್ತೀಯೆ. ಕಾಮಕಾಂಚನವೇ ಮಾಯೆ. ಸಾಧುವು ಹೆಂಗಸಿನಿಂದ ಬಹಳ ದೂರದಲ್ಲೇ ಇರಬೇಕು. ಅಲ್ಲಿ ಎಲ್ಲರೂ ಮುಳುಗಿಹೋಗುತ್ತಾರೆ. "ಆ ಸುಳಿಯಲ್ಲಿ ಬ್ರಹ್ಮ, ವಿಷ್ಣುಗಳೇ ಬಿದ್ದುಹೋಗಿ ಪ್ರಾಣಸಂಕಟಪಡುತ್ತಿದ್ದಾರೆ." (ಮಾಸ್ಟರ್ ತನಗೆ ತಾನೆ ಹೇಳಿಕೊಳ್ಳುತ್ತಿದ್ದಾನೆ). ಏನಾಶ್ಚರ್ಯ! ಈ ಉಚ್ಚ ಅವಸ್ಥೆ ಮುಟ್ಟಿದ ಮೇಲೂ ಕೆಳಕ್ಕೆ ಬೀಳುವ ಸಂಭವವಿರುವುದೆ? ಆ ಹೆಂಗಸು ಭಕ್ತಿಮತಿ; ಆದರೂ ಕೆಳಕ್ಕೆ ಬೀಳುವ ಸಂಭವ! ಸಾಧುಗಳಿಗೆ ಎಂತಹ ಕಠಿಣ ನಿಯಮ!